ಎರಡನೇ ಅಪರ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
ಮದ್ದೂರು
ಸಿ.ಸಿ. **2445/2021**

**ಫಿರ್ಯಾದಿದಾರರುಃ-** **ಮದ್ದೂರು ಪೋಲಿಸ್ ಠಾಣೆ**

**ವಿರುದ್ಧ**

**ಆರೋಪಿತರುಃ-**

**1. ಸುಧೀರ್ ಎಚ್.ಕೆ ಬಿನ್ ಕೃಷ್ಣ,**
**33 ವರ್ಷ, ಆಶ್ರಯ ಲಾಡ್ಜ ಮಾಲೀಕರು,**
**ಹೆಮ್ಮನಹಳ್ಳಿ ಗ್ರಾಮ, ಮದ್ದೂರು ತಾಃ**

**2. ಅಭಿಷೇಕ್ ಎಂ ಆರ್, ಬಿನ್ ಲೇಟ್ ರಾಜು,**
**26 ವರ್ಷ, ಖಾಸಗಿ ಕೆಲಸ,**
**ದೊಡ್ಡ ಬೀದಿ, ಮದ್ದೂರು ಟೌನ್.**

**3. ಮಹೇಶ್, ಬಿನ್ ಲೇಟ್ ಚನ್ನಪ್ಪ,**
**34 ವರ್ಷ, ವ್ಯವಸಾಯ,**
**ಬಸವನಪುರ ಗ್ರಾಮ, ಮಂಡ್ಯ ತಾಃ**

**-ಃದೋಷಾರೋಪಣೆಃ-**

ಶ್ರೀ. **ಕಿರಣ್ ಎಸ್.ಪಿ.,** ಬಿ.ಬಿ.ಎಂ., ಎಲ್.ಎಲ್.ಬಿ., ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳು, ಮದ್ದೂರು ಆದ ನಾನು ಈ ಮೇಲ್ಕಂಡ ನಿಮ್ಮನ್ನು ಈ ಕೆಳಗಿನಂತೆ ದೋಷಾರೋಪಣೆಗೆ ಒಳಪಡಿಸುತ್ತಿದ್ದೇನೆ :

ದಿನಾಂಕ 27-05-2018 ರಂದು ಸಂಜೆ 7-00 ಗಂಟೆ ಸಮಯದಲ್ಲಿ ಮದ್ದೂರು ಪೋಲಿಸ್ ಠಾಣಾ ಸರಹದ್ದಿಗೆ ಸೇರಿದ ಮದ್ದೂರು ಟೌನ್ ನಲ್ಲಿರುವ ಆಶ್ರಯ ಲಾಡ್ಜ್ ನಲ್ಲಿ ಮಹಿಳೆಯರನ್ನು ಇಟ್ಟುಕೊಂಡು ಅಕ್ರಮವಾಗಿ ವೇಶ್ಯಾವಾಟಿಕೆ ನಡೆಸುತ್ತಿದ್ದಾರೆಂದು ಮಾಹಿತಿ ಬಂದ ಮೇರೆಗೆ ರಾತ್ರಿ 8-45 ಗಂಟೆ ಸಮಯದಲ್ಲಿ ಚಾಸಾ.2 ಮತ್ತು ಚಾಸಾ.3 ರವರು ಚಾಸಾ.7 ರಿಂದ 11 ರವರನ್ನು ಕರೆದುಕೊಂಡು ಸದರಿ ಲಾಡ್ಜ್ ಬಳಿ ಹೋಗಿ ನೋಡಿದಾಗ 1 ನೇ ಆರೋಪಿಯಾದ ನೀನು ಲಾಡ್ಜ್ ಮಾಲೀಕನಾಗಿದ್ದು, 2 ಮತ್ತು 3 ನೇ ಆರೋಪಿತರಾದ ನೀವುಗಳು ಹುಡುಗಿಯರನ್ನು ಪುಸಲಾಯಿಸಿ ಕರೆದುಕೊಂಡು ಬಂದು ಬಿಡುವವರಾಗಿದ್ದು, 2 ಮತ್ತು 3 ನೇ ಆರೋಪಿತರಾದ ನೀವುಗಳು ಚಾಸಾ.4 ರಿಂದ 6 ರವರನ್ನು ಪುಸಲಾಯಿಸಿ ಲಾಡ್ಜ್ ಗೆ ಕರೆತಂದು ಅಕ್ರಮ ಹಣ ಸಂಪಾದನೆ ಮಾಡುವ ಸಲುವಾಗಿ ಅನೈತಿಕ ಲೈಂಗಿಕ ಚಟುವಟಿಕೆಯಲ್ಲಿ ತೊಡಗಿಸಲು ಚಾಸಾ.4 ರಿಂದ 6 ರವರನ್ನು

ರೂಮ್ ನಲ್ಲಿ ಇಟ್ಟುಕೊಂಡು ಅಕ್ರಮ ಲೈಂಗಿಕ ಚಟುವಟಿಕೆಗಳಿಗೆ ಪ್ರಚೋದನೆ ಮಾಡಿದ್ದರಿಂದ ಐ.ಟಿ.ಪಿ. ಆಕ್ಟ್ 3 ರಿಂದ 7 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರಿ ಎಂದು ದೋಷಾರೋಪಿಸುತ್ತೇನೆ.

ಪ್ರಶ್ನೆ 1: ಈ ಮೇಲೆ ಹೇಳಿ, ನಿಮಗೆ ವಿವರಿಸಲಾದ ಈ ದೋಷಾರೋಪಣೆ ಅರ್ಥವಾಯಿತಾ?

ಉತ್ತರಃ

ಪ್ರಶ್ನೆ 2 : ಈ ಮೇಲೆ ಹೇಳಿದ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ

(ಈ ಮೇಲೆ ಹೇಳಿದ ದೋಷಾರೋಪಣೆಯನ್ನು ಆರೋಪಿತರಿಗೆ ಅವರಿಗೆ ತಿಳಿಯುವಂತಹ ಕನ್ನಡ ಭಾಷೆಯಲ್ಲಿ ಓದಿ, ವಿವರಿಸಿ ಹೇಳಿ, ಅವರು ಕೊಟ್ಟಂತಹ ಉತ್ತರವನ್ನು ಅವರ ಭಾಷೆಯಲ್ಲಿಯೇ ಯಥವತ್ತಾಗಿ ನನ್ನ ಕೈ ಬರಹದಲ್ಲಿ ತೆರೆದ ನ್ಯಾಯಾಲಯದಲ್ಲಿ ಬರೆದುಕೊಂಡಿದ್ದೇನೆ.)

(ಶ್ರೀ ಕಿರಣ್ ಎಸ್.ಪಿ)

ದಿನಾಂಕಃ 15-07-2022 2 ನೇ ಅಪರ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ ಮದ್ದೂರು.